ಈ) ಉದ್ಭವಿಸುವುದಿಲ್ಲ

ಉ) ಬಂದಿದೆ, ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಸ್.ಸಿ.ಎಸ್.ಟಿ. ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ಅಕ್ರಮ ಹಗರಣಗಳು ಬೆಳಕಿಗೆ ಬಂದಿರುವುದು ನಿಜವೇ;

ಆ) ಈ ಅವ್ಯವಹಾರದ ಸ್ವರೂಪಗಳೇನು; ಅಕ್ರಮವಾಗಿರುವ ಮೊತ್ತವೆಷ್ಟು ಇದರಲ್ಲಿ ಭಾಗಿಯಾಗಿರುವ ಅಧಿಕಾರಿ – ನೌಕರರುಗಳು ಎಷ್ಟು; ಈ ಅಕ್ರಮಗಳು ಬೆಳಕಿಗೆ ಬಂದಿದ್ದು ಹೇಗೆ;

ಇ) ಲೋಕಾಯುಕ್ತ ಅಧಿಕಾರಿಗಳು ತನಿಖೆ ಮಾಡಿ ಪತ್ತೆ ಹಚ್ಚಿರುವರೇ ; ಹಾಗಿದ್ದಲ್ಲಿ ಇಂತಯವರ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವುದು;

ಈ) ನಿಗಮವು ಪೂರ್ತಿ ನಷ್ಟದಲ್ಲಿದ್ದು ಇದನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ;

ಉ) ನಿಗಮಕ್ಕೆ ಫಲಾನುಭವಿಗಳಿಂದ ಬರಬೇಕಾದ ಸಾಲದ ಬಾಕಿ ಮೊತ್ತ ಎಷ್ಟುಹಾಗೂ ಯಾವಾಗಿನಿಂದ ಬಾಕಿ ಇದೆ; ಬಾಕಿ ವಸೂಲಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ ; ವಿವರ ನೀಡುವುದು ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ರಾಯಚೂರು ಹಾಗೂ ಬೆಂಗಳೂರು ನಗರ ಜಿಲ್ಲೆಗಳ ಜಿಲ್ಲಾ ಕಛೇರಿಗಳಲ್ಲಿ ಸಾಲ ವಿತರಣೆಯಲ್ಲಿ ನಿಯಮಬಾಹಿರ ಅವ್ಯವಹಾರದ ಹಗರಣಗಳು ನಡೆದಿರುವುದು ಪ್ರಾಥಮಿಕ ತನಿಖೆಯಿಂದ ಕಂಡು ಬಂದಿದೆ.

ಆ) ರಾಯಚೂರು ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ನಿಯಮ ಉಲ್ಲಂಘಿಸಿ ಸಾಲ ಬಿಡುಗಡೆ ಮಾಡಿರುವ ಪ್ರಕರಣಗಳಲ್ಲಿ ಒಟ್ಟು ರೂ.೩೯.೩೦ ಲಕ್ಷ ಅವ್ಯವಹಾರ ನಡೆದಿರುವುದು ಪ್ರಾಥಮಿಕ ತನಿಖೆಯಿಂದ ಕಂಡು ಬಂದಿದೆ. ಈ ಅವ್ಯವಹಾರದಲ್ಲಿ ನಿಗಮದ ೪ ಮಂದಿ ಅಧಿಕಾರಿಗಳು ಹಾಗೂ ೪ ಮಂದಿ ಸಿಬ್ಬಂದಿ ವರ್ಗದವರು ಹಾಗೂ ೮ ಮಂದಿ ಮಧ್ಯವರ್ತಿಗಳು ಭಾಗಿಯಾಗಿರುವುದು

ಮೇಲ್ನೋಟಕ್ಕೆ ಕಂಡು ಬಂದಿದೆ. ಸಂಘ ಸಂಸ್ಥೆಗಳಿಂದ ಬಂದ ದೂರುಗಳನ್ನು ಆಧರಿಸಿ ರಾಯಚೂರು ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಆ ಮೇರೆಗೆ ನಿಗಮದ ಉನ್ನತ ಅಧಿಕಾರಿಗಳ ನೇತೃತ್ವದಲ್ಲಿ ವಿವರವಾದ ತನಿಖೆ ನಡೆಸಲು ತಂಡ ರಚಿಸಿ ತನಿಖಾ ತಂಡದಿಂದ ಹಗರಣದ ಬಗ್ಗೆ ಪೂರ್ಣ ವಿವರ ಸಂಗ್ರಹಿಸಲಾಗಿದೆ. ಆರೋಪಿತ ಅಧಿಕಾರಿ/ನೌಕರರು ಹಾಗೂ ಮಧ್ಯವರ್ತಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ. ಪ್ರಕರಣವು ವಿಚಾರಣೆ ಹಂತದಲ್ಲಿದೆ. ವಿವಿಧ ದಲಿತ ಸಂಘಟನೆಗಳು ಬೆಂಗಳೂರುನಗರ ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಮತ್ತು ಐ.ಎಫ್.ಬಿ ಯೋಜನೆಯಡಿ ಆಟೋರಿಕ್ಷಾ ಸಾಲ ವಿತರಣೆಯಲ್ಲಿ ಅವ್ಯವಹಾರ ನಡೆದಿರುವುದಾಗಿ ತಿಳಿಸಿ ಸಲ್ಲಿಸಿದ ದೂರಿನನ್ವಯ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ದಲಿತ ಸಂಘಟನೆಗಳೊಂದಿಗೆ ೦೩-೦೭-೦೩ ರಂದು ಸಭೆ ನಡೆಸಿ ನಿಗಮದಿಂದ ತನಿಖೆ ನಡೆಸಲು ತಿಳಿಸಿದ ಮೇರೆಗೆ ನಿಗಮದ ಅಧಿಕಾರಿಗಳನ್ನೊಳಗೊಂಡ ಒಂದು ತನಿಖಾ ತಂಡವನ್ನು ರಚಿಸಿ ಅದರ ಮುಖಾಂತರ ೧೧೨ ಆಟೋರಿಕ್ಷಾ ಫಲಾನುಭವಿಗಳ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಶೆ. ೭೦ ರಷ್ಟು ಸೌಲಭ್ಯವು ದುರುಪಯೋಗ ವಾಗಿರುವುದು ಬೆಳಕಿಗೆ ಬಂದಿರುತ್ತದೆ. ಈ ಹಗರಣದಲ್ಲಿ ೪ ಜನ ಅಧಿಕಾರಿಗಳು, ೪ ಜನ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಮತ್ತು ೮ ಜನ ಮಧ್ಯವರ್ತಿಗಳು ಭಾಗಿಯಾರಿರುವುದು ಕಂಡು ಬಂದಿದೆ. ೧೯೯೮-೯೯ನೇ ಸಾಲಿನಿಂದ ೨೦೦೨-೦೩ ಸಾಲಿನ ವರೆಗೆ ಮಂಜೂರು ಮಾಡಿರುವ ಸುಮಾರು ೨೫೦೦ ಆಟೋರಿಕ್ಷಾ ಪ್ರಕರಣಗಳ ಪೂರ್ಣ ಪ್ರಮಾಣದ ತನಿಖೆಗಾಗಿ ಸಿ.ಒ.ಡಿ. ಗೆ ಒಪ್ಪಿಸಲಾಗಿದೆ.

ಇ) ಮೇಲ್ಕಾಣಿಸಿದ ವ್ಯವಹಾರಗಳ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ತನಿಖೆ ನಡೆಸಿರುವುದಿಲ್ಲ. ನಿಗಮದ ಉನ್ನತ ಅಧಿಕಾರಿಗಳ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿ ತನಿಖೆ ನಡೆಸಲಾಗಿರುತ್ತದೆ.

ಈ) ಇಲ್ಲ

ಉ) ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಪ್ರಾರಂಭವಾದಗಿನಿಂದ ೨೦೦೪-೦೫ ನೇ ಸಾಲಿನ ಅಂದರೆ ದಿನಾಂಕ ೩೧.೩.೦೫ ರ ಅಂತ್ಯಕ್ಕೆ ನಿಗಮಕ್ಕೆ ಫಲಾನುಭವಿಗಳಿಂದ ಬರಬೇಕಾದ ಮೊತ್ತ ರೂ. ೧೪೧೪೮.೨೮

ಲಕ್ಷ ಆಗಿದ್ದು ಇದುವರೆವಿಗೂ ಅಂದರೆ ದಿ: ೩೧.೩.೦೫ ರವರೆಗೆ ರೂ.೮೧೪೮.೫೭ ಲಕ್ಷ ಹಣ ವಸೂಲಾತಿ ಮಾಡಲಾಗಿರುತ್ತದೆ. ನಿಗಮವು ಫಲಾನುಭವಿಗಳಿಂದ ಸಾಲ ವಸೂಲು ಮಾಡಲು ಹಲವಾರು ಕ್ರಮಗಳನ್ನು ತೆಗೆದು ಕೊಂಡಿರುತ್ತದೆ.

೧. ಸಾಲ ವಸೂಲು ಮಾಡಲು ಫಲಾನು ಭವಿಗಳಿಗೆ ನೋಟೀಸ್‌ಗಳನ್ನು ಜಾರಿ ಮಾಡಿ, ಆ ಮೂಲಕ ಸಾಲ ವಸೂಲಾತಿಗೆ ಕ್ರಮ ಜರುಗಿಸಲಾಗಿದೆ.

೨. ಫಲಾನುಭವಿಗಳನ್ನು ನಿಗಮದ ಅಧಿಕಾರಿಗಳು ಖುದ್ದಾಗಿ ಭೇಟಿ ಮಾಡಿ ಅದರ ಮನವೊಲಿಸುವುದರ ಮುಖಾಂತರ ಸಾಲ ವಸೂಲಾತಿ ಮಾಡಲಾಗುತ್ತಿದೆ.

೩. ಮೇಲ್ಕಾಣಿಸಿದ ಕ್ರಮಗಳು ಫಲಕಾರಿಯಾಗದ ಸಂದರ್ಭದಲ್ಲಿ ಲೀಗಲ್ ನೋಟೀಸ್‌ಗಳನ್ನು ಕಳುಹಿಸುವ ಮೂಲಕ ಸಾಲ ವಸೂಲಾತಿಗೆ ಶ್ರಮಿಸಲಾಗುತ್ತಿದೆ.

೪. ಜಿಲ್ಲಾ ಮಟ್ಟದಲ್ಲಿ ಸೀಜಿಂಗ್ ಏಜೆನ್ಸಿಗಳನ್ನು ನೇಮಕ ಮಾಡಲಾಗಿದ್ದು, ಆ ಮೂಲಕ ವಾಹನ, ಸ್ವತ್ತುಗಳನ್ನು ವಶಕ್ಕೆ ತೆಗೆದುಕೊಂಡು ಸಾಲ ವಸೂಲಾತಿಗೆ ಕ್ರಮಕೈಗೊಳ್ಳಲಾಗಿದೆ. ಇದೇ ರೀತಿ ರಾಜ್ಯಮಟ್ಟದ ಸೆಂಟ್ರಲ್ ಸೀಜಿಂಗ್ ಏಜೆನ್ಸಿಯನ್ನು ಸಹ ನೇಮಕ ಮಾಡುವುದರ ಮುಖಾಂತರ ಸಾಲ ವಸೂಲಾತಿಗೆ ಹೆಚ್ಚಿನ ಒತ್ತು ಕೊಡಲಾಗಿದೆ.

೫. ಸಾಲ ವಸೂಲಾತಿಯನ್ನು ಉತ್ತಮಪಡಿಸಲು ವಿಭಾಗ ಮಟ್ಟದಲ್ಲಿ ನಾಲ್ಕು ಜನ ತಹಶೀಲ್ದಾರರನ್ನು ನಿಯೋಜನೆ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

೬. ಸ್ವಯಂ ಉದ್ಯೋಗ ಯೋಜನೆಯ ಬಹಳ ಹಳೆಯ ಸಾಲದ ಮೊಬಲಗಾದ ರೂ.೧೭.೦೦ ಕೋಟಿಗಳನ್ನು ಮನ್ನಾ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

೭. ಉದ್ದೇಶ ಪೂರ್ವಕವಾಗಿ ಸಾಲ ಕಟ್ಟದೆ ಸುಸ್ತಿ-ದಾರರಾದವರಿಗೆ ನೀಡಲಾದ ವಾಹನಗಳನ್ನು / ಸ್ವತ್ತುಗಳನ್ನು ಸೀಜಿಂಗ್ ಏಜೆನ್ಸಿಗಳ ಮುಖಾಂತರ ವಶಕ್ಕೆ ತೆಗೆದುಕೊಂಡು ಕಾಲಾವಕಾಶ ನೀಡಿದರೂ ಸಾಲ ಮರುಪಾವತಿಸದೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಹರಾಜು ಪ್ರಕ್ರಿಯೆ ಮುಖಾಂತರ ಸ್ವಾಧೀನಪಡಿಸಿಕೊಂಡ ಸ್ವತ್ತುಗಳನ್ನು ಬಿಕರಿ ಮಾಡಿ ಸಾಲ ವಸೂಲು ಮಾಡಲಾಗುತ್ತಿದೆ.

೮. ಸಾಲದ ಅವಧಿ ಪೂರ್ಣಗೊಂಡಿರುವ ಪ್ರಕರಣಗಳಿಗೆ ಸಂಬಂಧಿಸಿದ ಫಲಾನುಭವಿಗಳು ಬಾಕಿ ಇರುವ ಅಸಲನ್ನು ಒಂದೇ ಕಂತಿನಲ್ಲಿ ಕಟ್ಟಿದ ಪಕ್ಷದಲ್ಲಿ ಬಡ್ಡಿಯನ್ನು ಮನ್ನಾ ಮಾಡುವುದು ಪರಿಶೀಲನೆಯಲ್ಲಿದೆ.